# ಮರಾಠಿ ದಲಿತ ಕಾವ್ಯ ನಡೆದುಬಂದ ದಾರಿ

**ಅಶೋಕ ಎನ್. ಎಸ್.**
ಸಹಾಯಕ ಪ್ರಾಧ್ಯಾಪಕರು
ಭಾಷಾ ವಿಭಾಗ (ಕನ್ನಡ)
ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ
ನವನಿಹಾಳ, ಓಕಳಿ ಅಂಚೆ,
ಕಮಲಾಪುರ ತಾಲ್ಲೂಕು, ಕಲಬುರಗಿ.

**Article Link: https://aksharasurya.com/2024/03/ashoka-n-s.php**

**DOI: https://doi.org/10.5281/zenodo.10775141**

## ABSTRACT:

ಪ್ರಸ್ತುತ ಸಂಶೋಧನಾ ಲೇಖನವು ಮರಾಠಿ ದಲಿತ ಕಾವ್ಯ ಬೆಳೆದುಬಂದ ಹಾದಿಯನ್ನು ಕುರಿತು ಚರ್ಚಿಸುತ್ತದೆ. ಮಹಾರಾಷ್ಟ್ರದಲ್ಲಿ ದಲಿತ ಸಾಹಿತ್ಯ ಹುಟ್ಟುಪಡೆಯಲು ದೊರೆತ ಸ್ಫೂರ್ತಿ ಹಾಗೂ ಪ್ರೇರಣೆಗಳ ಹುಡುಕಾಟದ ನೆಲೆಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಮರಾಠಿ ದಲಿತ ಸಾಹಿತ್ಯ ಇಡೀ ಭಾರತೀಯ ಇತರೆ ಭಾಷೆಗಳ ದಲಿತ ಸಾಹಿತ್ಯಗಳಿಗಿಂತ ಹೆಚ್ಚು ಪ್ರಬಲವಾಗಿ ರೂಪುಗೊಳ್ಳಲು ಕಾರಣವಾದ ಐತಿಹಾಸಿಕ ಮೈಲಿಗಲ್ಲುಗಳನ್ನು ಗುರುತಿಸಲಾಗಿದೆ. ಮರಾಠಿ ದಲಿತ ಸಾಹಿತ್ಯ 1970 ರಿಂದೀಚೆಗೆ ಬಹಳಷ್ಟು ಪ್ರಚಲಿತಕ್ಕೆ ಬಂದಿದ್ದರೂ, ಅದರ ಮೂಲ ಬೇರುಗಳು ಬಾಬಾ ಸಾಹೇಬ್ ಅಂಬೇಡ್ಕರ್, ಮಹಾತ್ಮ ಜ್ಯೋತಿ ಬಾಪುಲೆ ಹಾಗೂ ಅಕ್ಷರದವ್ವ ಸಾವಿತ್ರಿ ಬಾಪುಲೆ ಅವರ ಚಳುವಳಿಗೆ ಹೋಗುತ್ತದೆ. ಮರಾಠಿ ದಲಿತ ಸಾಹಿತ್ಯಕ್ಕೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬಹುದೊಡ್ಡ ನಿಧಿಯ ಆಗರವಾಗಿದ್ದರು. ಶೋಷಿತ ಸಮುದಾಯಗಳ ಪರವಾದ ಅವರ ವಿಚಾರಗಳು, ಚಿಂತನೆಗಳು ಹೇಗೆ ಇಡೀ ಭಾರತೀಯ ದಲಿತ ಸಾಹಿತ್ಯವನ್ನು ಬಹದೊಡ್ಡ ಮಟ್ಟದಲ್ಲಿ ಪ್ರಭಾವಿಸಿತ್ತು ಎಂಬುದರ ಶೋಧವನ್ನು ಇಲ್ಲಿ ಮಾಡಲಾಗಿದೆ. ಅಂಬೇಡ್ಕರ್ ಅವರು 'ಪೀಪಲ್ಸ್ ಎಜುಕೇಶನ್ ಸೊಸೈಟಿ' ಸ್ಥಾಪಿಸಿ, ಅವಕಾಶವಂಚಿತ ಶೋಷಿತ ಸಮುದಾಯಕ್ಕೆ ಉನ್ನತ ಶಿಕ್ಷಣವನ್ನು ತಲುಪಿಸುವ ನಿಟ್ಟಿನಲ್ಲಿ, ಮುಂಬೈಯಲ್ಲಿ ಸಿದ್ಧಾರ್ಥ ಕಾಲೇಜನ್ನು ಆರಂಭಿಸಿದರು. ಅವರ ಶಿಕ್ಷಣ, ಸಂಘಟನೆ ಮತ್ತು ಹೋರಾಟ ಈ ಮೂರು ಸೂತ್ರಗಳು ಮರಾಠಿಯಷ್ಟೆ ಅಲ್ಲದೇ ಇಡೀ ಭಾರತೀಯ ದಲಿತ ಸಾಹಿತ್ಯಕ್ಕೆ ನಾಂದಿ ಹಾಡಿದವು. ಈ ನಿಟ್ಟಿನಲ್ಲಿ ಹುಟ್ಟುಪಡೆದ ಅನೇಕ ಸಂಘಟನೆಗಳು, ಸಂಸ್ಥೆಗಳು ಮರಾಠಿ ದಲಿತ ಸಾಹಿತ್ಯಕ್ಕೆ ತಳಹದಿಯನ್ನು ಹಾಕಿದವು. ಈ ಹಿನ್ನೆಲೆಯಲ್ಲಿ ಅನೇಕ ಮರಾಠಿ ದಲಿತ ಸಾಹಿತಿಗಳು ಶೋಷಿತರ ದನಿಯಾಗಿ ಕಾವ್ಯವನ್ನೇ ತಮ್ಮ ಹತಾರವನ್ನಾಗಿ ಮಾಡಿಕೊಂಡದ್ದನ್ನು, ಹಲವು

ಕವಿಗಳ ಕಾವ್ಯವನ್ನು ಉದಾಹರಿಸುತ್ತಾ ಪ್ರಸ್ತುತ ಸಂಶೋಧನಾ ಲೇಖನದಲ್ಲಿ ವಸ್ತುನಿಷ್ಠವಾಗಿ ಚರ್ಚಿಸಲಾಗಿದೆ.

**KEYWORDS:**

ಪೀಪಲ್ಸ್ ಎಜುಕೇಶನ್ ಸೊಸೈಟಿ, ಮಹಾರಾಷ್ಟ್ರ ದಲಿತ ಸಾಹಿತ್ಯ ಸಂಘ, ಮಹಾರಾಷ್ಟ್ರ ಬೌದ್ಧ ಸಾಹಿತ್ಯ ಸಭೆ, ಯಾಂಗ್ರಿಯಂಗ್ ಮ್ಯಾನ್, ರಿಪಬ್ಲಿಕನ್ ಪಕ್ಷ, ದಲಿತ ಪ್ಯಾಂಥರ್ಸ್.

ಮಾನವ ಸಮಾಜದಲ್ಲಿ ಜಗತ್ತಿನ ಎಲ್ಲಾ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಒಂದಲ್ಲ ಒಂದು ಬಗೆಯ ಪ್ರತಿರೋಧವನ್ನು ಕಾಣುತ್ತೇವೆ. ಈ ಬಗೆಯ ಬಂಡಾಯ ಮನೋಧರ್ಮದ ಪ್ರವೃತ್ತಿ ಸಾಹಿತ್ಯದಲ್ಲಿ ಅತ್ಯಂತ ಅನಿವಾರ್ಯವಾದ ಕ್ರಿಯೆ ಕೂಡಾ ಆಗಿರುತ್ತದೆ. ಈ ಪ್ರತಿಭಟನೆಯ ಕಲ್ಪನೆಯನ್ನು ನಾವು ಹಲವು ಬಗೆಗಳಲ್ಲಿ ಅರ್ಥೈ ಸಬಹುದು. ಒಬ್ಬ ಗುಲಾಮ ತನ್ನ ಯಜಮಾನನ ವಿರುದ್ಧ ಬಂಡೇಳುತ್ತಾನೆ. ಈ ಬಂಡೇಳುವ ಪ್ರವೃತ್ತಿಯನ್ನು ಆತ ಅಕ್ಷರಗಳ ರೂಪದಲ್ಲಿ ಬರೆದು ವ್ಯಕ್ತಪಡಿಸಿದರೆ ಅದು ಬಂಡಾಯ ಸಾಹಿತ್ಯವಾಗುತ್ತದೆ. ಈ ಪ್ರತಿಭಟನೆ ಕೇವಲ ಸಾಮಾಜಿ ಕವಷ್ಟೆ ಅಲ್ಲದೆ ಅದು ರಾಜಕೀಯದ್ದು ಆಗಿರಬಹುದು, ತಾನು ವಾಸಿಸುತ್ತಿರುವ ಪರಿಸರದ ವಿರುದ್ಧವಾಗಿರಬಹುದು. ಮಾನವೀಯ ಸಂಬಂಧಗಳನ್ನು ಸ್ಥಾಪನೆ ಮಾಡುವ ಸಲುವಾಗಿ ನಡೆಸುವ ಆಂದೋಲನಗಳು ಈ ಪ್ರತಿಭಟನೆಯ ವ್ಯಾಪ್ತಿಯೊಳಗೇ ಬರುತ್ತವೆ. ದಲಿತ ಚಿಂತಕರಾದ ಡಾ.ಸರಜೂ ಕಾಟ್ಕರ್ ಅವರು ಮರಾಠಿ ಸಾಹಿತ್ಯದ ಗಟ್ಟಿತನವನ್ನು ಕುರಿತಂತೆ ಮಹತ್ವದ ವಿಚಾರಗಳನ್ನು ಈ ರೀತಿ ಹೇಳುತ್ತಾರೆ."ಪ್ರತಿಭಟನೆ ಮನುಷ್ಯನ ಮೂಲ ಸ್ವಭಾವಗಳಲ್ಲಿ ಒಂದು. ಮನುಷ್ಯನ ಪ್ರಜ್ಞೆಗೆ ಅಥವಾ ಅವನ ಅಸ್ಮಿತೆಗೆ ಅವಮಾನವಾದಾಗ ಆತ ಸಿಡಿದೇಳುವುದು ಸಹಜ. ಈ ಸಿಡಿದೇಳುವ ಕ್ರಿಯೆ ಒಂದೊಂದು ಸಲ ಅನೇಕಾನೇಕ ವರ್ಷಗಳ ಕಾಲಾವಧಿಯನ್ನು ತೆಗೆದುಕೊಂಡಿರುವುದು ಇತಿಹಾಸ ಗುರುತಿಸಿರುವ ಸತ್ಯ. ಅನ್ಯಾಯ, ಅತ್ಯಾಚಾರಗಳು ಸಹನಾತೀತವಾದಾಗ ಅವುಗಳಿಗೆ ಧ್ವನಿ ಮೂಡುತ್ತದೆ. ಆಗ ಮೂಕನಾಗಿದ್ದವನೂ ಮಾತನಾಡಲಾರಂಭಿಸುತ್ತಾನೆ. ಅವನ ಮಾತುಗಳು ವ್ಯವಸ್ಥೆಯನ್ನು ಪ್ರಶ್ನಿಸಲಾರಂಭಿಸುತ್ತವೆ. ಈ ಹಿನ್ನೆಲೆಯಲ್ಲಿ ನಾವು ಮರಾಠಿಯ ದಲಿತ ಸಾಹಿತ್ಯವನ್ನು ನೋಡಿದಾಗ ಅದಕ್ಕಿರುವ ತೀಕ್ಷ್ಣತೆ ಹಾಗೂ ಸಂವೇದನೆ ಭಾರತದ ಉಳಿದೆಲ್ಲ ಭಾಷೆಗಳಲ್ಲಿರುವ ದಲಿತ ಸಾಹಿತ್ಯಕ್ಕಿಂತಲೂ ಹೆಚ್ಚು ಶಕ್ತಿಶಾಲಿಯಾದುದು. ಒಂದು ರೀತಿಯಲ್ಲಿ ಮರಾಠಿ ದಲಿತ ಸಾಹಿತ್ಯ ನೀಗ್ರೋ ಸಾಹಿತ್ಯದಷ್ಟೇ ತೀಕ್ಷ್ಣವಾದುದು. ಅನೇಕ ಶತಮಾನಗಳಿಂದ ಉಂಡ ಕಹಿ ಅನುಭವಗಳು ಅಕ್ಷರಗಳ

ರೂಪದಲ್ಲಿ ಬಾಂಬ್‌ಗಳಾಗಿ ಸಿಡಿದಿದ್ದನ್ನು ಕಾಣಬಹುದು" ಎಂದು ಡಾ. ಸರಜೂ ಕಾಟ್ಕರ್ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಮರಾಠಿ ದಲಿತ ಸಾಹಿತ್ಯ 1970 ರಿಂದೀಚೆಗೆ ಬಹಳಷ್ಟು ಪ್ರಚಲಿತಕ್ಕೆ ಬಂದಿದ್ದರೂ, ಅದರ ಮೂಲ ಬೇರುಗಳು ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಅದಕ್ಕಿಂತ ಮೊದಲು ಮಹಾತ್ಮ ಜ್ಯೋತಿ ಬಾಪುಲೆ ಹಾಗೂ ಸಾವಿತ್ರಿ ಬಾಪುಲೆ ಅವರ ಚಳುವಳಿಗೆ ಹೋಗುತ್ತದೆ. ಬಾಬಾ ಸಾಹೇಬ್ ಅಂಬೇಡ್ಕರ್ ಮರಾಠಿ ದಲಿತ ಸಾಹಿತ್ಯಕ್ಕೆ ಸಿಕ್ಕ ದೊಡ್ಡ ನಿಧಿಯ ಆಗರ. ಅಂಬೇಡ್ಕರ್ ಅವರ ವಿಚಾರಗಳು, ಚಿಂತನೆಗಳು ಇಡೀ ಭಾರತೀಯ ದಲಿತರನ್ನು ಬಡಿದೆಬ್ಬಿಸಿ, ಅವರಲ್ಲಿ ಜಾಗೃತಿಯನ್ನು ಮೂಡಿಸಿವೆ. ಮರಾಠಿಯಲ್ಲಿ ಎಲ್ಲಕ್ಕಿಂತ ಹೆಚ್ಚು ಪ್ರಭಾವವನ್ನು ಕಾಣಬಹುದು. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು 1946 ರಲ್ಲಿ 'ಪೀಪಲ್ಸ್ ಎಜುಕೇಶನ್ ಸೊಸೈಟಿ' ಸ್ಥಾಪಿಸಿ ಅದೇ ಸಮಯಕ್ಕೆ ಅವಕಾಶವಂಚಿತ ಶೋಷಿತ ಯುವಜನರಿಗೆ ಉನ್ನತ ಶಿಕ್ಷಣವನ್ನು ತಲುಪಿಸುವ ಸಲುವಾಗಿ ಮುಂಬೈಯಲ್ಲಿ ಸಿದ್ಧಾರ್ಥ ಕಾಲೇಜನ್ನು ಆರಂಭಿಸಿದರು. ಇದೇ ಸಂಘಟನೆ ಮುಂದೆ 1953ರಲ್ಲಿ 'ಮಹಾರಾಷ್ಟ್ರ ದಲಿತ ಸಾಹಿತ್ಯ ಸಂಘ'ವೆಂಬ ಹೆಸರಿನಲ್ಲಿ ಮಾರ್ಪಾಡು ಹೊಂದಿ ಇಂದಿನ ಮರಾಠಿ ದಲಿತ ಸಾಹಿತ್ಯದ ರಚನೆಗೆ ನಾಂದಿ ಹಾಡಿತು.

1953–54 ರಲ್ಲಿ ಮರಾಠಿಯ ಪ್ರಸಿದ್ಧ ಚಿಂತಕ ಅಣ್ಣಾಭಾವು ಸಾಠೆ ದಲಿತ ಜೀವನದ ನೈಜ ಚಿತ್ರಣ ನೀಡುವ ಸಾಹಿತ್ಯ ಕೃಷಿ ಮಾಡಿದರು. ಇಲ್ಲಿ ಮರಾಠಿ ಸಾಹಿತಿಗಳಿಗೆ ಸಾಹಿತ್ಯಕ್ಕಿಂತ ಸಂಘಟನೆ, ಚಳುವಳಿ ಮುಖ್ಯವಾಗಿದ್ದವು. ಸಾಹಿತ್ಯ ಎನ್ನುವುದು ಅನಿವಾರ್ಯವಾಗಿತ್ತು.'ಮರಾಠಿಯ ದಲಿತ ಸಾಹಿತಿಗಳು ಅಣ್ಣಾಭಾವು ಸಾಠೆಯವರನ್ನು ಮರಾಠಿಯ ಪ್ರಪ್ರಥಮ ಶ್ರೇಷ್ಠ ದಲಿತ ಸಾಹಿತಿಯೆಂದು ಗೌರವಿಸುತ್ತಾರೆ' ಎಂದು ಡಾ. ಸರಜೂ ಕಾಟ್ಕರ್ 'ಮರಾಠಿ ದಲಿತ ಕಾವ್ಯ' ಸಂಕಲನದ 'ಮರಾಠಿ ದಲಿತ ಕಾವ್ಯ ಪ್ರಸ್ಥಾನ'ದಲ್ಲಿ ಉಲ್ಲೇಖಿಸುತ್ತಾರೆ. ಇಲ್ಲಿನ ಸಾಹಿತಿಗಳು ಡಾ. ಸಿದ್ಧಲಿಂಗಯ್ಯನವರನ್ನು ಕನ್ನಡ ದಲಿತ ಬಂಡಾಯ ಕಾವ್ಯದ ಆದಿಕವಿ ಎಂದು ಕರೆಯುತ್ತಾರೆ. ಅಣ್ಣಾಭಾವು ಸಾಠೆಯವರು ಸುಮಾರು 300 ಕಥೆಗಳನ್ನು 96 ಕಾದಂಬರಿಗಳನ್ನು ಬರೆದಿದ್ದಾರೆ. 1958 ಮಾರ್ಚ್ 2 ರಂದು ಮಹಾರಾಷ್ಟ್ರದ ದಲಿತ ಸಾಹಿತ್ಯ ಸಂಘ ಮುಂಬೈಯಲ್ಲಿ ದಲಿತ ಸಾಹಿತ್ಯ ಸಮ್ಮೇಳನವೊಂದನ್ನು ಆಯೋಜಿಸುತ್ತದೆ. ಈ ಸಮ್ಮೇಳನದಲ್ಲಿ ದಲಿತ ಸಾಹಿತ್ಯವನ್ನು ಕುರಿತಂತೆ ಬಹಳ ದೊಡ್ಡ ಮಟ್ಟದಲ್ಲಿ ಚರ್ಚೆಯಾಗುತ್ತದೆ. ಈ ರೀತಿಯ ಸಾಹಿತ್ಯವನ್ನು ದಲಿತ ಸಾಹಿತ್ಯ ಎಂದು ಕರೆಯಬೇಕೆಂಬ ಬಗ್ಗೆಯೂ ಕೂಡಾ ಅಲ್ಲಿ ಚರ್ಚೆ ನಡೆಸಲಾಗುತ್ತದೆ."ಮರಾಠಿ ಭಾಷೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ದಲಿತ ಲೇಖಕರು ಬರೆದ ಮತ್ತು ಅನ್ಯ

ಲೇಖಕರು ದಲಿತರ ಬಗ್ಗೆ ರಚಿಸಿದ ಸಾಹಿತ್ಯ ದಲಿತ ಸಾಹಿತ್ಯವೆಂದು ವರ್ಗೀಕರಿಸಬೇಕೆಂದೂ" ಒಂದು ಗೊತ್ತುವಳಿಯನ್ನು ಸಮ್ಮೇಳನದಲ್ಲಿ ಸ್ವೀಕರಿಸಲಾಯಿತು ಎಂದು ಡಾ. ಸರಜೂ ಕಾಟ್ಕರ್ ತಿಳಿಯಪಡಿಸುತ್ತಾರೆ. ತದನಂತರ ಅಲ್ಲಲ್ಲಿ ದಲಿತ ಲೇಖಕರ ಸಮ್ಮೇಳನಗಳು ಆರಂಭವಾದವು. ಅಂಬೇಡ್ಕರ್ ಹುಟ್ಟುವುದಕ್ಕಿಂತ ಮುಂಚೆಯಿಂದಲೂ ಬರೆಯುತ್ತಿದ್ದ ಅಸ್ಪೃಶ್ಯ ಸಾಹಿತಿಗಳಾರೂ ತಮ್ಮನ್ನು ತಾವು ದಲಿತ ಸಾಹಿತಿಗಳೆಂದು ಕರೆದುಕೊಳ್ಳಲಿಲ್ಲ. ಸಮ್ಮೇಳನಗಳಲ್ಲಿ ಈ ಸಾಹಿತ್ಯವನ್ನು ಏನೆಂದು ಕರೆಯಬೇಕೆಂದು ವಾದಗಳು ಬೆಳೆದು ಅಂತಿಮವಾಗಿ ದಲಿತ ಸಾಹಿತ್ಯವೆಂದು ಕರೆಯಬೇಕೆಂದು ತೀರ್ಮಾನಿಸಲಾಯಿತು. ಆದರೆ ಆನಂತರ 'ದಲಿತ ಸಾಹಿತ್ಯ ಸಂಘ' ಎಲ್ಲರನ್ನು ಒಳಗೊಳ್ಳುವಲ್ಲಿ ಸೋಲನ್ನು ಅನುಭವಿಸಿತು. ಯಾಕೆಂದರೆ ಇದರಲ್ಲಿ ಕೆಲಸ ಮಾಡುವಂತವರು ಅಂಬೇಡ್ಕರ್ ಹುಟ್ಟುಹಾಕಿದ 'ರಿಪಬ್ಲಿಕನ್ ಪಕ್ಷ'ದ ಕಾರ್ಯಕರ್ತರಾಗಿದ್ದರು. ಅಂಬೇಡ್ಕರ್ ಅವರ ಪರಿನಿರ್ವಾಣದ ನಂತರ ಎರಡು ವರ್ಷಗಳ ಅವಧಿಯಲ್ಲೆ 'ರಿಪಬ್ಲಿಕನ್ ಪಕ್ಷ'ದಲ್ಲಿ ಸಾಮಾಜಿಕತೆ ಹೋಗಿ ಸ್ವಾರ್ಥ ತುಂಬಿ ವ್ಯಕ್ತಿಸ್ಪರ್ಧೆ ಆರಂಭವಾಗಿತ್ತು. ಇದರ ಪರಿಣಾಮದಿಂದ ಈ ಪಕ್ಷ ಗುಂಪು ಗುಂಪುಗಳಾಗಿ ಒಡೆದು ಚೂರು ಚೂರಾಯ್ತು. ಇದರ ಪರಿಣಾಮ 'ದಲಿತ ಸಾಹಿತ್ಯ ಸಂಘ'ದ ಮೇಲೂ ಬೀರಿತು. ಮುಂದೆ ಕೆಲವರು 'ಮಹಾರಾಷ್ಟ್ರ ಬೌದ್ಧ ಪರಿಷತ್' ಶುರು ಮಾಡಿದರೆ ಮತ್ತೆ ಕೆಲವರು 'ಮಹಾರಾಷ್ಟ್ರ ಬೌದ್ಧ ಸಾಹಿತ್ಯ ಸಭೆ' ಆರಂಭಿಸಿದರು. ಇದೇ ವೇಳೆ ಪ್ರಸಿದ್ಧ ಲೇಖಕರು ಬಾಬೂರಾವ್ ಬಾಗೂಲ್, ಶಂಕರ್‌ರಾವ್ ಖರಾತ್ ಬರೆಯಲಾರಂಭಿಸಿದರು. 1960 ರ ನಂತರ ಅನೇಕರು ಬಂದು ಇಲ್ಲಿ ಸೇರಲಾರಂಭಿಸಿದರು. ಕೆಲ ದಲಿತ ಬರಹಗಾರರು 'ಯಾಂಗ್ರಿ ಯಂಗ್ ಮ್ಯಾನ್' ಎಂಬ ಪುಟ್ಟ ನಿಯತಕಾಲಿಕೆಗಳನ್ನು ಆರಂಭಿಸಿದರು. ಈ ಹಿನ್ನೆಲೆಯಲ್ಲಿ ಕವಿತೆಗಳು, ನಾಟಕಗಳು, ಕಥೆಗಳು, ವಿಮರ್ಶೆಗಳು ಪ್ರಕಟವಾದವು.

ಸ್ವತಂತ್ರ ಭಾರತದ ನಂತರ ಈ ಚಳುವಳಿಗೆ ಹೆಚ್ಚಿನ ಮಹತ್ವ ಸಿಗಲಾರಂಭಿಸಿತು. ಅಂದರೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಜನರಿಂದ ಜನರಿಗಾಗಿ ಜನರೇ ಆಯ್ಕೆ ಮಾಡುವ ಪ್ರಕ್ರಿಯೆಯಿಂದ ಯಾವುದೇ ಫಲಿತಾಂಶ ಕಾಣದ ದಲಿತರು, ದಲಿತರಿಗಾಗಿ ದಲಿತರೇ ಆರಂಭಿಸಿದ ಹೋರಾಟವಾಗಿ ಪರಿವರ್ತಿತವಾಯಿತು. ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಹೋರಾಟದಿಂದ ಈ ಚಳುವಳಿಗೆ ದೊಡ್ಡಮಟ್ಟದ ವೈಚಾರಿಕತೆಯ ಸ್ವರೂಪ ಸಿಗಲು ಸಾಧ್ಯವಾಯಿತು. ಗಾಂಧೀವಾದ, ಮಾರ್ಕ್ಸ್‌ವಾದ, ಹಾಗೂ ಸಮಾಜವಾದ ಇವುಗಳ ಜೊತೆಜೊತೆಯಲ್ಲಿಯೇ ದಲಿತ ಚಳುವಳಿ ಕ್ರಮೇಣವಾಗಿ ಗಟ್ಟಿಗೊಳ್ಳತೊಡಗಿತು. ನಂತರ ಅಂಬೇಡ್ಕರ್ ಅವರ ಚಿಂತನೆಗಳನ್ನು ಅಳವಡಿಸಿಕೊಂಡು ಮುಂದುವರೆಯಿತು. ಅಂಬೇಡ್ಕರ್

ಅವರು ಬೌದ್ಧ ಧರ್ಮ ಸ್ವೀಕಾರ ಮಾಡಿದ್ದು, ಭಾರತೀಯ ಸನಾತನವಾದಿಗಳಿಂದ ದಲಿತ ಜನಾಂಗದ ಮೇಲೆ ನಡೆಯುತ್ತಿದ್ದ ದರ್ಪ, ದೌರ್ಜನ್ಯ, ಅಪಮಾನಗಳಿಂದ ದಲಿತರನ್ನು ಬಿಡುಗಡೆಗೊಳಿಸಿದಂತಹ ಚಾರಿತ್ರಿಕ ಸನ್ನಿವೇಶ ಅದಾಗಿತ್ತು. ಈ ಮೂಲಕ ಭಾರತೀಯ ದಲಿತ ಜನಾಂಗಕ್ಕೆ ಬಹಳ ದೊಡ್ಡಮಟ್ಟದ ಸ್ವಾಭಿಮಾನ ಮೂಡಿಬರಲು ಸಾಧ್ಯವಾಯಿತು. ಅಂಬೇಡ್ಕರ್ ಅವರು ಸ್ಥಾಪಿಸಿದ 'ಪೀಪಲ್ಸ್ ಎಜುಕೇಶನ್ ಸೊಸೈಟಿ'ಯಂಥ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯಲು ಭಾರತದಾದ್ಯಂತ ನೊಂದುಬೆಂದಂತಹ ಶೋಷಿತ ದಲಿತ ವಿದ್ಯಾರ್ಥಿಗಳು ಸಾವಿರಾರು ನದಿಗಳು ಸೇರಿ ಸಾಗರವಾಗಿ ಹರಿದಂತೆ ವ್ಯಾಪಕ ಪ್ರಮಾಣದಲ್ಲಿ ಹರಿದು ಬಂದರು. ಅಂಬೇಡ್ಕರ್ ಅವರ ಶಿಕ್ಷಣ, ಸಂಘಟನೆ ಮತ್ತು ಹೋರಾಟ ಈ ಮೂರು ಸೂತ್ರಗಳು ದಲಿತ ಜನಾಂಗದ ಮೇಲೆ ಅತ್ಯಂತ ಪ್ರಭಾವವನ್ನುಂಟು ಮಾಡಿದವು. ಅಂಬೇಡ್ಕರ್ ಅವರ ನಂತರ ಮಹಾರಾಷ್ಟ್ರದ ದಲಿತ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ಸಂಘಟನೆ ದಲಿತ ಪ್ಯಾಂಥರ್ಸ್. ಈ ಸಂಘಟನೆ 1972 ರ ಜುಲೈ 9 ರಂದು ಮುಂಬೈಯಿಯ ಸಿದ್ದಾರ್ಥ ಕಾಲೇಜಿನಲ್ಲಿ ಅಸ್ತಿತ್ವಕ್ಕೆ ಬಂದಿತು. ಮಹಾರಾಷ್ಟ್ರದಲ್ಲಿ ಸವರ್ಣೀಯರಿಂದ ದಲಿತರ ಮೇಲೆ ನಡೆದಂತಹ ದೌರ್ಜನ್ಯಗಳು ಈ ಸಂಘಟನೆಯ ಹುಟ್ಟಿಗೆ ಪ್ರಮುಖ ಕಾರಣವಾಯಿತು. ತದನಂತರ ಎಲ್ಲಾ ರಾಜಕೀಯ ಪಕ್ಷಗಳು ದಲಿತರನ್ನು ದಾಳವಾಗಿ ದುರುಪಯೋಗ ಮಾಡಿಕೊಳ್ಳಲು ಶುರು ಮಾಡಿದ ಮೇಲೆ ಸ್ವಲ್ಪ ಮಂಕು ಕವಿದಂತೆ ಆಗಿತ್ತು. ಇದನ್ನರಿತ ಪ್ರಜ್ಞಾವಂತ ಯುವಕರು 'ದಲಿತ ಪ್ಯಾಂಥರ್ಸ್' ಸಂಘಟನೆಯನ್ನು ಮತ್ತಷ್ಟು ಬಲಗೊಳಿಸಲು ಮುಂದಾದರು.

ಪ್ಯಾಂಥರ್ಸ್ ಚಳುವಳಿ ಹಿಂದೂ ಧರ್ಮದಲ್ಲಿರುವಂತಹ ಅನಿಷ್ಟ ಪದ್ಧತಿಗಳಾದ ಅಸ್ಪೃಶ್ಯತೆ, ಜಾತೀಯತೆ, ದೇವರು ಧರ್ಮದ ಹೆಸರಿನಲ್ಲಿ ನಡೆಸುವ ಶೋಷಣೆ, ಡಂಭಾಚಾರದ ವಿರುದ್ಧ ಬಂಡಾಯ ಹೂಡಿ ಪ್ರತಿಭಟಿಸುವ ಚಳುವಳಿಯಾಯಿತು. ಅಲ್ಲದೆ ಅಧಿಕಾರಶಾಹಿ ಹಾಗೂ ಸವರ್ಣೀಯರ ದರ್ಪ, ದೌರ್ಜನ್ಯಗಳನ್ನು ಎದುರಿಸಲು ದಲಿತ ಪ್ಯಾಂಥರ್ಸ್ ಸಂಘಟನೆ ಹಲವಾರು ರೂಪುರೇಷೆಗಳನ್ನು ಸಿದ್ಧತೆ ಮಾಡಿಕೊಂಡಿತು. ಈ ಚಳುವಳಿಯಿಂದ ದಲಿತ ಸಾಹಿತ್ಯ ವಿಪುಲವಾಗಿ ಬೆಳೆಯತೊಡಗಿತು. ಸವರ್ಣೀಯರ ವಿರುದ್ಧ ಪ್ರತಿಭಟನೆ ಮಾಡಿದಂತಹ ಕವಿ ಗವಯಿಬಂಧುಗಳ ಕಣ್ಣು ಕಿತ್ತಿದಾಗ ತ್ರ್ಯಂಬಕ ಸಪಕಾಳೆ ಈ ರೀತಿ ಕವಿತೆಯನ್ನು ಬರೆಯುತ್ತಾರೆ. ಈ ಕೆಳಕಂಡ ಪದ್ಯಗಳನ್ನು ಮರಾಠಿಯಿಂದ ಕನ್ನಡಕ್ಕೆ ಡಾ. ಸರಜೂ ಕಾಟ್ಕರ್ ಅವರು ಈ ರೀತಿ ಅನುವಾದ ಮಾಡುತ್ತಾರೆ. ಸರಜೂ ಕಾಟ್ಕರ್ ಅವರು ಈ ಕವಿಗಳೆಲ್ಲರು ಯಾವ ಯಾವ ಸಂದರ್ಭ ಸನ್ನಿವೇಶಗಳಲ್ಲಿ ತಮ್ಮ ಕವನಗಳನ್ನು

ಬರೆದಿದ್ದಾರೆ ಎಂಬುದನ್ನು ಕೂಡಾ ತಿಳಿಸುತ್ತಾ ಹೋಗುತ್ತಾರೆ.

**ಗವಯಿ ಬಂಧುಗಳ ಕಣ್ಣು ಕಿತ್ತರು**
**ಬರಲಿಲ್ಲ ಯಾರಿಗೂ ಕಣ್ಣೀರು**
**ಎಲ್ಲಿಯೂ ಆಗಲಿಲ್ಲ ನಿಷೇಧದ ಸಭೆ**

**(ಮರಾಠಿ ದಲಿತ ಕಾವ್ಯ)**

ದಲಿತರ ನೋವಿಗೆ ಸ್ಪಂದಿಸದ ಸಮಾಜದ ಮೇಲ್ವರ್ಗದ ಅಮಾನವೀಯತೆಯನ್ನು ಸಪಕಾಳೆ ಈ ರೀತಿಯಲ್ಲಿ ಹೇಳಿಕೊಂಡರೆ, ಅದೇ ರೀತಿ ದಲಿತ ಯುವಕನೊಬ್ಬನ ಮೇಲೆ ಸವರ್ಣೀಯರಿಂದ ಹಲ್ಲೆಯಾದಾಗ ಹಲ್ಲೆಗೊಳಪಟ್ಟವನ ಆಕ್ರೋಶವನ್ನು ಜ.ವಿ ಪವಾರ ಅವರು ತಮ್ಮ ಕವನದ ಮೂಲಕ ಈ ರೀತಿ ಪ್ರತಿಕ್ರಿಯಿಸುತ್ತಾರೆ.

**ಬಿಡಿ ಬಿಡಿ ನನ್ನ**
**ಈ ನಾಯಿಗಳನ್ನು**
**ಹರಿದು ಹಾಕಲು**
**ಈ ಹರಾಮಖೋರರಿಗೆ**
**ನನ್ನ ಪೌರುಷ ತೋರಿಸಲು ಬಿಡಿ**

**(ಮರಾಠಿ ದಲಿತ ಕಾವ್ಯ)**

ಶೇರಪೂರ ಎಂಬ ಗ್ರಾಮದ ದಲಿತರ ಮೇಲೆ ಮೇಲ್ವರ್ಗದವರು ಅತ್ಯಾಚಾರ ಎಸಗಿದಾಗ ಎಂ.ಎಸ್ ಅಂಧೇರಿಕರ ಈ ರೀತಿ ಹೇಳುತ್ತಾರೆ.

**ಇಂದು ಶೇರಪೂರದ ಹೊಲಗೇರಿ**
**ಬೆಂಕಿಹತ್ತಿ ಉರಿಯುತ್ತಿರುವಾಗ**
**ಇವರ ಷಂಢ ಮಾನವತೆಗೆ**
**ನಮ್ಮ ಆತ್ಮಗಳ ಧೂಪ ಉರಿಸುತ್ತಿದ್ದೇವೆ.**
**ನಾಲ್ಕು ನಿಟ್ಟಿನಿಂದ ಬೆಂಕಿಯ ಕೆನ್ನಾಲಿಗೆ ಚಾಚುತ್ತಿದೆ**
**ದಯವೆ ಧರ್ಮದ ಮೂಲವೆನ್ನುವ ಈ ಹರಾಮಖೋರರು**
**ಹೊತ್ತಿ ಉರಿಯುವ ಬೆಂಕಿಗೆ ಚಿಮಣಿ ಎಣ್ಣೆ ಸುರಿಯುತ್ತಿದ್ದಾರೆ**

**(ಮರಾಠಿ ದಲಿತ ಕಾವ್ಯ)**

ಹೀಗೆ ದಲಿತರ ಮೇಲೆ ನಡೆದಂತಹ ದೌರ್ಜನ್ಯಗಳನ್ನು ಖಂಡಿಸಿ ಕವಿಗಳು ತಮ್ಮ ಪದ್ಯಗಳ ಮೂಲಕ ಈ ರೀತಿ ಪ್ರತಿಭಟಿಸುತ್ತಾರೆ. ಮುಂದುವರೆದು ನಮ್ಮ ದೇಶದಲ್ಲಿ ಹಿಂದೂ ಧರ್ಮ ಶೋಷಣೆಯ ಆಗರವಾಗಿರುವುದರ ಬಗ್ಗೆ, ಹಾಗೆ ಅದು ಹೇಗೆ ತಾರತಮ್ಯದ ಅಸಮಾನತೆಯ ಕೇಂಂದ್ರವಾಗಿದೆ ಎಂಬುದನ್ನು ಕಿಸನ ಫಾಗೂ ಬನಸೋಡೆ ಈ ರೀತಿ ಹೇಳುತ್ತಾ ವಿಡಂಬಿಸುವ ಪರಿ ಆಕ್ರೋಶದಿಂದ ಕೂಡಿರುವಂತದ್ದು.

**"ನೋಡಿ ನೋಡಿ ನನ್ನ ಜನಗಳೇ**
**"ಈ ಹಿಂದೂ ದೇಶ ನನ್ನದು**
**ತಾರತಮ್ಯದ ಮೂಲಸ್ಥಾನ**
**ಬೇಧಭಾವಗಳ ಹಿಂದೂಸ್ಥಾನ**
**ದ್ವೇಷಕ್ಕೆ ನಿಡುತ್ತದೆ ಸನ್ಮಾನ, ಈ ಹಿಂದೂ ದೇಶ ನನ್ನದು"**

**(ಮರಾಠಿ ದಲಿತ ಕಾವ್ಯ)**

ಈ ಹಿಂದೂ ಧರ್ಮದ ಸಮಾಜದೊಳಗೆ ಸವರ್ಣೀಯರು ತಮ್ಮ ಮನೆಗಳಲ್ಲಿ ನಾಯಿ ಪಕ್ಷಿ ಪಶುಗಳನ್ನು ಇಟ್ಟುಕೊಳ್ಳುತ್ತಾರೆ. ಆದರೆ ದಲಿತರನ್ನು ಮನೆಯೊಳಗೆ ಸೇರಿಸದ ಇವರು ಈ ಪ್ರಾಣಿಗಳಿಗಿಂತ ಕಡೆಯಾಗಿ ನೋಡುವುದನ್ನು ಕಂಡುಕಿಸನ ಫಾಗೂ ಬನಸೋಡೆ ತನ್ನನ್ನು ಮುಂದಿನ ಜನ್ಮದಲ್ಲಿ ಪಶು ಪಕ್ಷಿ ಮಾಡು ಆದರೆ ದಲಿತನನ್ನಾಗಿ ಮಾತ್ರ ಹುಟ್ಟಿಸಬೇಡ ಎಂದು ಆ ದೇವರಲ್ಲಿ ಪ್ರಾರ್ಥಿಸುತ್ತಾರೆ. (ದೇವರು ಇದ್ದಲ್ಲಿ) ಕನ್ನಡದಲ್ಲಿ ಸಿದ್ಧಲಿಂಗಯ್ಯನವರು 'ನಮ್ಮ ಹೇಲು ತಿನ್ನೋ ನಾಯಿನಾ ಒಳಕ್ಕೆ ಬಿಟ್ಕೋತಿರಾ ನಮ್ಮನ್ನ ಮಾತ್ರ ಒಳಗೆ ಸೇರಿಸಲ್ಲ' ಎಂದು ಹೇಳುವ ದಯನೀಯ ಮಾತು ಕೇಳಿಸುತ್ತದೆ.

**ಹರಿಯೇ, ನನ್ನ ಪಶುಮಾಡು ಪಕ್ಷಿಮಾಡು**
**ಹೊಲೆಯನನ್ನಾಗಿ ಮಾತ್ರ ಮಾಡಬೇಡ**
**ಪಕ್ಷಿಯಾದರೆ ಹಿಂದೂಗಳು ಹಾಡು ಕಲಿಸುವರು**
**ಹೊಲೆಯನಾದರೆ ದೂರ ಸರಿಸುವರು**

**(ಮರಾಠಿ ದಲಿತ ಕಾವ್ಯ)**

ಮರಾಠಿ ದಲಿತ ಕಾವ್ಯ ಪ್ರಧಾನವಾಗಿ ಬುದ್ಧ, ಅಂಬೇಡ್ಕರ್ ಮತ್ತು ಕಾರ್ಲ್‌ಮಾರ್ಕ್ಸ್ ಅವರ ತತ್ವಗಳಿಂದ ಪ್ರಭಾವಗೊಂಡಿರುವುದು ಕಾಣುತ್ತದೆ. ದಲಿತರಿಗೆ ಅಂಬೇಡ್ಕರ್ ಒಂದು ಮಹಾಸಾಗರ, ದಾರಿದೀಪ. ಬಹುತೇಕ ದಲಿತ ಕವಿಗಳ ಕಾವ್ಯದ ಶ್ರದ್ಧಾಕೇಂದ್ರ ಅಂಬೇಡ್ಕರ್. ಅವರನ್ನು ಕುರಿತಂತೆ ಬರೆದಿರುವ ಕಾವ್ಯಗಳು ಅನೇಕವು. ನಾಮದೇವ ಢಸಾಳರು ಪ್ರತಿವರ್ಷ ಅಂಬೇಡ್ಕರ್ ಜಯಂತಿಗೆ ತಪ್ಪದೆ ಅಂಬೇಡ್ಕರ್ ಅವರನ್ನು ಕುರಿತಂತೆ ಕವಿತೆ ಬರೆಯುವುದು ಅವರ ವಾಡಿಕೆ. ನಾಮದೇವ ಢಸಾಳ ಅಂಬೇಡ್ಕರ್‌ರನ್ನು 'ದಲಿತ ಸಮಾಜ ರಥದ ಸಾರಥಿ' ಎಂದು ಕರೆಯುತ್ತಾರೆ.

**ಯಾವನು ಸ್ವಾತಂತ್ರ್ಯದಿಂದ ಸ್ವಾತಂತ್ರ್ಯದೆಡೆಗೇ ಹೋಗುತ್ತಾನೋ, ಆತ**
**ನೀನು ಏಕೈಕ ನಮ್ಮ ರಥದ ಸಾರಥಿ**
**ದಿಗ್ವಿಜಯ ಮುಖಮುದ್ರೆಯಿಂದ ನಮ್ಮಲ್ಲಿ ನೇರವಾಗಿ ಹೊಲದಲ್ಲಿಂದ**
**ಜನಸಂದಣಿಯಲ್ಲಿಂದ ಒಂದಾಗುವವ**
**ಮೋರ್ಚಾ, ಹೋರಾಟಗಳಲ್ಲಿ ನಮ್ಮೊಂದಿಗೆ ಇರುವವ**

**(ಮರಾಠಿ ದಲಿತ ಕಾವ್ಯ)**

ಜ. ವೀ ಪವಾರ್ ಅಂಬೇಡ್ಕರ್ ಅವರನ್ನು ಕುರಿತಂತೆ ಹೇಳುವ ಪರಿ ಈ ಕೆಳಕಂಡಂತೆ ಕಾಣುತ್ತದೆ.

**ಪರಿಸ್ಥಿತಿ ಮೇಲೆ ಸವಾರನಾಗಿ**
**ಹೊಸ ಇತಿಹಾಸವನ್ನೇ ಸೃಷ್ಟಿಸಿದೆ**
**ಮೂಕ ಸಮಾಜದ ನಾಯಕನಾಗಿ**
**ಬಹಿಷ್ಕೃತ ಭಾರತವನ್ನೇ ನಿದ್ದೆಯಿಂದ ಎಚ್ಚರಿಸಿದೆ**

**(ಮರಾಠಿ ದಲಿತ ಕಾವ್ಯ)**

ಹೀಗೆ ಆಧುನಿಕ ಮರಾಠಿ ದಲಿತ ಕಾವ್ಯದ ಚರಿತ್ರೆಯ ಗುರುತುಗಳನ್ನು ನೋಡುತ್ತಾ ಹೋಗಬಹುದು. ಇನ್ನೂ ಅನೇಕ ಕವಿಗಳು ತಮ್ಮೊಳಗಿನ ಸಿಟ್ಟು, ನೋವು, ಆಕ್ರೋಶ, ಅಸಹಾಯಕತೆಯನ್ನು ಬಗೆಬಗೆಯಲ್ಲಿ ವ್ಯಕ್ತಪಡಿಸುತ್ತಾ ಹೊಗುತ್ತಾರೆ. ಕನ್ನಡ ದಲಿತ ಸಾಹಿತಿಗಳಲ್ಲಿ ಅನೇಕರು ಕಾವ್ಯವನ್ನೇ ತಮ್ಮ ಹತಾರವಾಗಿ ಹೇಗೆ ಆಯ್ಕೆ ಮಾಡಿಕೊಂಡರೋ ಹಾಗೇ ಮರಾಠಿ ದಲಿತ ಕವಿಗಳೂ ಕೂಡಾ ಕಾವ್ಯವನ್ನೇ ಹೆಚ್ಚಾಗಿ ಅವಲಂಬಿಸಿದರು. ಮರಾಠಿಯಲ್ಲಿ ಗದ್ಯ ಬರಹಗಳೂ ಅಷ್ಟೇ ತೀಕ್ಷ್ಣವಾಗಿ ಅಭಿವ್ಯಕ್ತಗೊಂಡಿರುವುದು ಕಾಣುತ್ತದೆ. ಮರಾಠಿ ದಲಿತ ಕವಿಗಳಲ್ಲಿ ಪ್ರಮುಖವಾಗಿ ಕಿಸನ ಫಾಗೂ ಬನಸೋಡೆ, ಶಾಹೀರ್, ಘೇಗಡೆ, ವಾಮನರಾವ ಕರ್ಡಕ, ಸೋನುಲೆ, ಬಾಳಕೃಷ್ಣ ವಾಸನಿಕ, ನಾ.ರಾ ಶೇಂಡೆ, ಲಖಮಾಪುರಖರ ಹಾಗೂ ಮಧು ಕೊಸಾರೆ, ನಾರಾಯಣ ಸುರ್ವೆ, ನಾಮದೇವ ಢಸಾಳ, ದಯಾ ಪವಾರ, ನಿಂಬಾಳ್ಕರ್, ಕೇಶವ ಮೇಶ್ರಾಮ, ಶರಣ ಕುಮಾರ ಲಿಂಬಾಳೆ, ಪಾಂಡೂ ಪಾಟೀಲ, ವಸಂತರಾಜಸ, ಮಲ್ಲಿಕಾ ಅಮರಶೇಖ, ಅಶೋಕ ಬನಸೋಡೆ, ಪಹ್ಲಾದ ಚೆಂದವಣಕರ್, ಬಬನ್ ಚಹಾಂದೆ, ಸುನೀಲ ಓವಾಳ, ಬಬನ್ ಲೋಂಡೆ, ಅರ್ಜುನ ಡಾಂಗಳೆ ಇನ್ನೂ ಮುಂತಾದ ಅನೇಕ ಕವಿಗಳನ್ನು ಹೆಸರಿಸಬಹುದು.

**ಪರಾಮರ್ಶನ ಗ್ರಂಥಗಳು:**

1. ಸರಜೂ ಕಾಟ್ಕರ್. (1999). ಮರಾಠಿ ದಲಿತ ಕಾವ್ಯ. ಲೋಹಿಯಾ ಪ್ರಕಾಶನ. ಬಳ್ಳಾರಿ.
2. ಸರಜೂ ಕಾಟ್ಕರ್. (1996). ಕನ್ನಡ–ಮರಾಠಿ ದಲಿತ ಸಾಹಿತ್ಯ. ರೂಪ ಪ್ರಕಾಶನ. ಮೈಸೂರು.
3. ಅನುಪಮಾ ಎಚ್. ಎಸ್. (2012). ಉರಿಯ ಪದವು ನಾಮದೇವ್ ಢಸಾಳ್ ಕವಿತೆಗಳು (ಅನು). ಲಡಾಯಿ ಪ್ರಕಾಶನ. ಗದಗ.
4. ಕಮಲಾಕರ ಕಡವೆ. ನಿಮಿಷಾ ಬಂಡೆಲು ಮತ್ತು ಸಾಜಿಭಟ್ (ಸಂ). (2017). ನಾಮದೇವ ಢಸಾಳ ವಾಚಿಕೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ. ಬೆಂಗಳೂರು.
5. ದಂಡಪ್ಪ ಕೊಂಡ್ರಹಳ್ಳಿ. (2012). ಸಿದ್ಧಲಿಂಗಯ್ಯ ವಾಚಿಕೆ (ಸಂ). ನುಡಿ ಪುಸ್ತಕ ಪ್ರಕಾಶನ. ಬೆಂಗಳೂರು.